

## ಪ್ರಸಾದ ಕಹಿಯಿತ್ತೇಕೆ?

ಗುಂಡಣ್ಣ: ನಿನ್ನೆ ದೇವಸ್ಥಾನದಲ್ಲಿ ಏನಾಯ್ತು ಗೊತ್ತಾ ರಂಗಣ್ಣ?
ರಂಗಣ್ಣ: ಏನಾಯ್ತು?
ಗುಂಡಣ್ಣ: ಮಂಗಳಾರತಿ ನಂತರ ಅರ್ಚಕರು ಎಲ್ಲರಿಗೂ ಏನೋ ಹಂಚುತ್ತಿದ್ದರು. ನನ್ನ ಅಂಗೈಗೂ ಎರಡು ಹನಿ ಹಾಕಿದ್ರು. ನಾನು ಅದನ್ನು ತೀರ್ಥ ಅಂದುಕೊಂಡು ಸೇವಿಸಿ 'ಅರ್ಚಕರೇ ಇದು ಏನೋ ಒಂಥರಾ ಇದೆ. ಇದೆಂಥ ಪ್ರಸಾದ?' ಅಂತ ಕೇಳ್ದೆ.
ರಂಗಣ್ಣ: ಅದಕ್ಕೆ ಅವರು ಏನಂದ್ರು?
ಗುಂಡಣ್ಣ: 'ಅಯ್ಯೋ ದಡ್ಡ ಇದು ಪ್ರಸಾದ ಅಲ್ಲ. ಸ್ಯಾನಿಟೈಸರ್. ಚೆನ್ನಾಗಿ ಕೈ ಒರೆಸಿಕೋಳ್ಳೋಕೆ ಕೊಟ್ಟಿದ್ದು. ಪ್ರಸಾದ ಹಂಚೋದು ಇನ್ನು ಬಾಕಿ ಇದೆ' ಅಂದರು!

## ಕೊರೊನಾ ಹಾಸ್ಯ

ಹೆಣ್ಣು ಸೊಳ್ಳೆ: ರೀ ನಮಗೆ ಹುಟ್ಟೋ ಮರೀಗೆ ಏನಂತ ನಾಮಕರಣ ಮಾಡೋಣ?
ಗಂಡು ಸೊಳ್ಳೆ: ಹೆಣ್ಣು ಹುಟ್ಟಿದರೆ 'ಕೊರೊನಾ' ಅಂತ ಹೆಸರಿಡೋಣ, ಗಂಡು ಹುಟ್ಟಿದರೆ 'ಕೋವಿಡ್' ಅಂತ ಹೆಸರಿಡೋಣ ಅಷ್ಟೇ.
ಹೆಣ್ಣು ಸೊಳ್ಳೆ: ಏನ್ರೀ ಹೆಸರು ವಿಚಿತ್ರವಾಗಿದೆಯಲ್ಲಾ.
ಗಂಡು ಸೊಳ್ಳೆ: ಏನಿಲ್ಲ ಕಣೇ, ಮನುಷ್ಯರು ಮೊದಲು ನಮ್ಮನ್ನ ಕಂಡ್ರೆ ಹೆದರಿಕೊಳ್ತಾ ಇದ್ದರು. ಆದರೆ ಪ್ರಸ್ತುತ , ಹೊರದೇಶದಿಂದ 'ಕೊರೊನಾ' ಬಂದಮೇಲೆ ನಾವೆಲ್ಲ ಲೆಕ್ಕಕ್ಕೇ ಇಲ್ಲ. ಕೊರೊನಾ ಅಥವಾ ಕೋವಿಡ್ ಹೆಸರು ಕೇಳಿದ್ರೇ ಗಡಗಡ ನಡುಗುತ್ತಾರೆ ಜನ. ಅದಕ್ಕಾಗಿ ನಾವು ನಮ್ಮ ಹುಟ್ಟೋ ಮಗುವಿಗೆ ಈ ಹೆಸರಿಟ್ಟರೆ ನಮ್ಮ ಸ್ಥಾನಮಾನ ಉಳಿಸಿಕೊಳ್ಳಬಹುದೇನೋ ಅಂತ.

★★★

ಬಸವ: ಯಾಕಣ್ಣಾ, ಬಾಯಿಗೆ ಅರಿವೆ ಕಟ್ಟಂಡು, ಗಿಡ ಕತ್ತರಿಸೋ ಕತ್ತರೀ ತಗಂಡು, ಮಾರು ದೂರ ನಿತ್ಗಂಡು ನನ್ನ ಕೂದ್ಲು ಕತ್ತರಿಸ್ತಾ ಇದ್ದೀಯಲ್ಲೋ. ಯಾಕೋ?
ಕ್ಷೌರಿಕ: ಯಾಕೆ ಗೊತ್ತಾ ಬಸವ. ಹೊರದೇಸದಿಂದ ನಮ್ಮ ದೇಸಕ್ಕೆ ಅದು ಯಾವುದೋ ಕೊರೊನಾ ಅಂತ ಒಂದು ಅಂಟು ಜಾಡ್ಯ ಬಂದೈತಂತೋ. ಅದಕ್ಕಾಗಿ ನಮ್ಮ ಇಡೀ ದೇಸದಾಗಿನ ಜನ ಒಬ್ಬರಿಗೊಬ್ಬರು ಮೂರು ಮೀಟರ್ ದೂರದಾಗೆ ಇರಬಾಕಂತೆ. ಹತ್ರ ಹೋದ್ರೇ ಆ ಕಾಯಿಲೆ ಯಾರಿಗ್ಬೇಕಾದ್ರೂ ಬತ್ತೈತೆ ಅಂತ ಟಿ.ವಿ. ನ್ಯೂಸ್ ನಾಗೆ ಪ್ರಚಾರ ಮಾಡ್ತಾ ಅವ್ರೇ ಕಣ್ಲೋ.
ಬಸವ: ಅಯ್ಯೋ, ಉರಿತೈತೆ ಮಾರಾಯ. ಅದು ಏನು ಕೊರೊನಾ ಯಾವ ಜಾಡ್ಯಾನೋ ನೀನು ಕೂದ್ಲು ಕತ್ತರಿಸೋ ಬದ್ಲು ದೂರದಾಗೆ ನಿಂತ್ಗಂಡು ನನ್ನ ಕೊರಳನ್ನೇ ಕತ್ತರಿಸಿದೆಯಲ್ಲೋ.

★★★

ಅಪ್ಪ: ನನ್ನ ಮೊಬೈಲ್ ಎಲ್ಲೋ ಪುಟ್ಟಾ?
ಮಗ: ಅಪ್ಪಾ, ನಿನ್ನ ಮೊಬೈಲ್, ವಾಚು, ಪರ್ಸ್, ಕನ್ನಡಕ ಇವನ್ನೆಲ್ಲಾ ಸೋಪು ನೀರಲ್ಲಿ ಅದ್ದಿ ಇಟ್ಟಿದ್ದೀನಿ.
ಅಪ್ಪ: ಅಯ್ಯೋ ಪೆದ್ದಾ. ಎಲ್ಲಾ ಹಾಳಾಗೋಯ್ತು. ಯಾಕೋ ಹೀಗೆ ಮಾಡಿದೆ?
ಮಗ: ಅಪ್ಪಾ, ನೀನೆ ಹೇಳಿದ್ಯಲ್ಲಪಾ. ಮನೆಯಿಂದ ಹೊರಗಡೆ ಹೋಗಿ ವಾಪಾಸ್ ಬಂದು ಮೇಲೆ ನಾವು ತೆಗೆದುಕೊಂಡು ಹೋದ ವಸ್ತುಗಳು ಮತ್ತೆ ಅಂಗಡಿಯಿಂದ ತಂದ ಸಾಮಾನುಗಳನ್ನು ಸೋಪು ನೀರಿನಲ್ಲಿ ತೊಳೆದು ಉಪಯೋಗಿಸಬೇಕು, ಎಲ್ಲಾಕಡೆ ಕೊರೊನಾ ವೈರಸ್ ಕಾಯಿಲೆ ಹರಡ್ತಾ ಇದೆ ಅಂತ. ಅದಕ್ಕೆ ನೀನು ಅಂಗಡಿಯಿಂದ ತಂದಿರುವ ಹಣ್ಣು, ತರಕಾರಿಗಳ ಜೊತೆ ನಿನ್ನ ವಸ್ತುಗಳನ್ನೂ ಸೋಪು ನೀರಿನಲ್ಲಿ ನೆನೆಸಿದೆ.

★★★

ರಂಗಣ್ಣ: ಏನು ಗೊತ್ತಾ ನಿಂಗಣ್ಣ. ಶಾಪಿಂಗ್ ಬಂದ್, ಮಾಲ್‌ಗೆ ಹೋಗುವುದು ಬಂದ್, ಫಿಲಂಗೆ ಹೋಗುವುದು ಬಂದ್, ಹೊರಗೆ ಊಟಕ್ಕೆ ಹೋಗುವುದು ಬಂದ್ ಆಗಿರುವುದರಿಂದ ನಮ್ಮ ಹೆಂಡತಿಯರನ್ನು ಎಲ್ಲೂ ಕರೆದುಕೊಂಡು ಹೋಗಲು ಆಗುತ್ತಿಲ್ಲ.
ನಿಂಗಣ್ಣ: ಹೌದು. ನಮ್ಮ ಕೈಯಲ್ಲಿ ಆಗಲಾರದ್ದನ್ನು ಕೊರೊನಾ ವೈರಸ್ ಮಾಡಿ ತೋರಿಸ್ತು.

(ಸಂಗ್ರಹ) ಸುಭದ್ರ, ನೇಗಿಲೋಣಿ, ಬೆಂಗಳೂರು




ಆರೋಗ್ಯಕರವಾದ ಸವಿಯನ್ನು ಆನಂದಿಸಿ

Along with HERBS
100% NATURAL
ARECA TEA
ಆರೋಗ್ಯಕರ • ರುಚಿಕರ • ಉಲ್ಲಾಸಕರ




ಪ್ರಮೋಟರ್ಸ್: ಗ್ರೀನ್ ರೆಮೆಡೀಸ್, ಉಡುಪಿ
+91 820 252 9023
ಕಸ್ಟಮರ್ ಕೇರ್ ನಂ:
+91 80 2672 6337 / +91 63610 08174
ಇ ಮೇಲ್: arecatea@gmail.com

ಅರೇಕಾ ಟೀಯನ್ನು
www.arecatea.in ನಲ್ಲಿ ಖರೀದಿಸಿ

ಆನ್‌ಲೈನ್ ನಲ್ಲಿ ಖರೀದಿಸಿ amazon